## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

**ಃಸಿ.ಸಿ. ಸಂಖ್ಯೆ–395–2023**

ಪಿರ್ಯಾದಿ : ರಾಮಚಂದ್ರ ಬಿನ್ ಲೇ. ದೊಡ್ಡಯ್ಯ,
51 ವರ್ಷ,ಬಳ್ಳೂರು ಗ್ರಾಮ
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

**ವಿರುದ್ಧ**

ಆರೋಪಿ : ಶ್ರೀಮತಿ ಕಮಲ ಕೋಂ ಧರ್ಮೇಶ,
45 ವರ್ಷ, ಸನ್ಯಾಸಿಹಳ್ಳಿ ಗ್ರಾಮ ಮತ್ತು ಅಂಚೆ, ಕಸಬಾ
ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

**: ಆರೋಪಣೆಯ ಸಾರಾಂಶ :**

ಪಿರ್ಯಾದಿ ಮತ್ತು ಆರೋಪಿಯಾದ ನೀನು ದೂರದ ಸಂಬಂಧಿಕರಾಗಿದ್ದು ಆರೋಪಿಯಾದ ನೀನು ದಿಃ10.02.2023 ರಂದು ಪಿರ್ಯಾದಿಯ ಮನೆಗೆ ಬಂದು ಹೊಸ ಮನೆ ಕಟ್ಟುವ ಉದ್ದೇಶ ಹಾಗೂ ಇತರೆ ಗೃಹಕೃತ್ಯದ ಖರ್ಚಿಗಾಗಿ ರೂ.5,50,000–00 ಗಳನ್ನು ನಗದಾಗಿ ಪಡೆದಿದ್ದು, ಸದರಿ ಸಾಲವನ್ನು ಮರುಪಾವತಿ ಮಾಡುವ ಉದ್ದೇಶದಿಂದ ಆರೋಪಿಯಾದ ನೀನು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬೇಲೂರು ಶಾಖೆ, ಚೆಕ್ ನಂಃ222786 ರಲ್ಲಿ ರೂ.4,00,000/–ಮೊತ್ತದ ಚೆಕ್ಕನ್ನು ದಿನಾಂಕಃ04.03.2023ಕ್ಕೆ ನಮೂದಿಸಿ ಹಾಗೂ ಚೆಕ್ ನಂಃ850109 ರಲ್ಲಿ ರೂ.1,50,000/– ಮೊತ್ತದ ಚೆಕ್‌ನ್ನು ದಿನಾಂಕಃ28.03.2023ಕ್ಕೆ ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರನು ಸದರಿ ಚೆಕ್‌ನ್ನು ನಗಧೀಕರಿಸಿಕೊಳ್ಳುವ ಉದ್ದೇಶದಿಂದ ಪಿರ್ಯಾದಿಯು ತಾನು ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಬೇಲೂರು ಶಾಖೆಗೆ ದಿಃ21.04.2023 ರಂದು ಚೆಕ್ ನಂಃ850109 ಅನ್ನು ಹಾಜರುಪಡಿಸಿದಾಗ ಆರೋಪಿಯಾದ ನಿನ್ನ ಖಾತೆಯಲ್ಲಿ ಫಂಡ್ಸ್ ಇನ್ಸಫೀಷಿಯಂಟ್ ಎಂಬ ಹಿಂಬರಹದೊಂದಿಗೆ ದಿಃ 25.04.2023 ರಂದು ವಾಪಸ್ಸು ಬಂದಿದ್ದು, ನಂತರ ಆರೋಪಿಯಾ ದ

ನಿನ್ನನ್ನು ಖುದ್ದು ಬೇಟಿ ಮಾಡಿ ವಿಷಯವನ್ನು ತಿಳಿಸಿದಾಗ ಹಣವನ್ನು ಆಗ ಈಗ ಕೊಡುತ್ತೇನೆಂದು ಉಡಾಪೆಯಿಂದ ಉತ್ತರ ನೀಡಿದ್ದು, ಆನಂತರ ತನ್ನ ವಕೀಲರ ಮೂಲಕ ದಿನಾಂಕ:28.04.2023ರಂದು ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ಆರೋಪಿಯಾದ ನಿನಗೆ ಕಳಹಿಸಿದ್ದು, ಸದರಿ ನೋಟೀಸ್ ಅನ್ನು ದಿಃ02.05.2023 ರಂದು ಸ್ವೀಕರಿಸಿದ್ದು, ಸದರಿ ನೋಟೀಸ್‌ನ ಬಗ್ಗೆ ಆರೋಪಿಯಾದ ನಿನಗೆ ಎಲ್ಲಾ ಗೊತ್ತಿದ್ದರೂ ಸಹ, ಇದುವರೆಗೂ ಯಾವುದೇ ಹಣವನ್ನಾಗಲೀ, ಮರು ಉತ್ತರವನ್ನಾಗಲೀ ನೀಡಿರುವುದಿಲ್ಲ. ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*
*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರಃ*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 23.10.2024

(ಎಂ ಎಸ್ ಶಶಿಕಲಾ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು